KRN-Bg. GPO-25

# ಕರ್ನಾಟಕ ರಾಜ್ಯ ಪತ್ರ
**ಅಧಿಕೃತವಾಗಿ ಪ್ರಕಟಿಸಲಾದುದು**
**ವಿಶೇಷ ಪತ್ರಿಕೆ**
**ಭಾಗ 4–ಸೆಕ್ಷನ್ 2–ಸಿ(i)**

**ಬೆಂಗಳೂರು, ಗುರುವಾರ, ಸೆಪ್ಟೆಂಬರ್ 29, 1988**
**(ಆಶ್ವಯುಜ 7, ಶಕ ವರ್ಷ 1910)** **ನಂ.557**

## ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಸಚಿವಾಲಯ

**ಅಧಿಸೂಚನೆ ಸಂಖ್ಯೆ ಎಸ್‌ಡಬ್ಲ್ಯೂಎಲ್ 81 ಎಸ್‌ಡಬ್ಲ್ಯೂ 86**
**ಬೆಂಗಳೂರು, ದಿನಾಂಕ 26ನೇ ಸೆಪ್ಟೆಂಬರ್ 88.**

ಕರ್ನಾಟಕ ದೇವದಾಸಿಯರ (ಸಮರ್ಪಣಾ ನಿಷೇಧ) ಅಧಿನಿಯಮ 1982 (1984ರ ಕರ್ನಾಟಕ ಅಧಿನಿಯಮ ಸಂಖ್ಯೆ 1)ರ 7ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಅಗತ್ಯಪಡಿಸಿದಂತೆ ದಿನಾಂಕ 29ನೇ ಅಕ್ಟೋಬರ್ 1982ರ ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಖ್ಯೆಯ 4ನೇ ಭಾಗದ ಸೆಕ್ಷನ್ ಸಿ (1)ರಲ್ಲಿ ಪ್ರಕಟವಾದ ದಿನಾಂಕ 29ನೇ ಅಕ್ಟೋಬರ್ 1987ರ ಅಧಿಸೂಚನೆ ಸಂಖ್ಯೆ ಎಸ್‌ಡಬ್ಲ್ಯೂಎಲ್ 01 ಎಸ್‌ಡಬ್ಲ್ಯೂಡಬ್ಲ್ಯೂ 06ರಲ್ಲಿಯ ಕರ್ನಾಟಕ ದೇವದಾಸಿ (ಸಮರ್ಪಣಾ ನಿಷೇಧ) ನಿಯಮಗಳು, 1987ರ ಕರಡಿಗೆ ಅದರಿಂದ ಭಾದಿತವಾಗುವ ಸಂಭವವಿರುವ ಸಾರ್ವಜನಿಕರ ಆಕ್ಷೇಪಣೆಗಳು ಮತ್ತು ಸೂಚನೆಗಳನ್ನು 1987ರ ನವೆಂಬರ್ 30ರಂದು ಅಥವಾ ಅದಕ್ಕೂ ಮೊದಲು ತಿಳಿಸಬೇಕೆಂದು ಕೋರಿರುವುದರಿಂದ;

ಮತ್ತು ಸದರೀ ರಾಜ್ಯಪತ್ರವನ್ನು 29ನೇ ಅಕ್ಟೋಬರ್ 1987ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ;

ಮತ್ತು ಸದರೀ ಕರಡಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ಯಾವುದೇ ಆಕ್ಷೇಪಣೆಗಳು ಅಥವಾ ಸಲಹೆಗಳು ಬಂದಿಲ್ಲದಿರುವುದರಿಂದ;

ಈಗ 1982ರ ಕರ್ನಾಟಕ ದೇವದಾಸಿಯರ (ಸಮರ್ಪಣಾ ನಿಷೇಧ) ಅಧಿನಿಯಮ 1984ರ ಕರ್ನಾಟಕ ಅಧಿನಿಯಮ ಸಂಖ್ಯೆ 1)ರ ಪ್ರಕರಣ 7 ರಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಮೂಲಕ ಈ ಮುಂದಿನ ನಿಯಮಗಳನ್ನು ರಚಿಸುತ್ತದೆ ಎಂದರೆ :–

## ನಿಯಮಗಳು

1. ಶೀರ್ಷಿಕೆ ಮತ್ತು ಪ್ರಾರಂಭ – (1) ಈ ನಿಯಮಗಳನ್ನು ಕರ್ನಾಟಕ ದೇವದಾಸಿಯರ (ಸಮರ್ಪಣಾ ನಿಷೇಧ) ನಿಯಮಗಳು 1988 ಎಂದು ಕರೆಯತಕ್ಕದ್ದು.
   (2) ಅವು ಕೂಡಲೇ ಜಾರಿಯಲ್ಲಿ ಬರತಕ್ಕದ್ದು.

2. ಪರಿಭಾಷೆ – ಈ ನಿಯಮಗಳಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು "ಅಧಿನಿಯಮ" ಎಂದರೆ ಕರ್ನಾಟಕ ದೇವದಾಸಿಯರ (ಸಮರ್ಪಣಾ ನಿಷೇಧ) ಅಧಿನಿಯಮ 1988, (1984ರ ಕರ್ನಾಟಕ ಅಧಿನಿಯಮ 1).

3. ತನಿಖೆಯ ವಿಧಾನ :– ಈ ಅಧಿನಿಯಮದ ಅಡಿಯಲ್ಲಿನ ಅಪರಾಧಿಗಳ ತನಿಖೆಯನ್ನು ದಂಡ ಪ್ರಕ್ರಿಯಾ ಹಂಚಿಕೆ 1973ರ (1974ರ ಕೇಂದ್ರ ಅಧಿನಿಯಮ 2) ಉಪಬಂಧಗಳಿಗನುಸಾರವಾಗಿ ಮಾಡತಕ್ಕದ್ದು.

4. ದೇವದಾಸಿಯರ ಸುರಕ್ಷಿತ ಅಭಿರಕ್ಷೆ–ಈ ಅಧಿನಿಯಮವು ಪ್ರಾರಂಭವಾದ ತರುವಾಯ, ಯಾವೊಬ್ಬ ದೇವದಾಸಿಯನ್ನು ಮ್ಯಾಜಿಸ್ಟ್ರೇಟರ ಮುಂದೆ ಕರೆತಂದಾಗಲೆಲ್ಲಾ, ಅವರು ತಾವು ಉಪಚಿತವೆಂದು ಭಾವಿಸುವ ಅಂಥ ವಿಚಾರಣೆಯನ್ನು ನಡೆಸಿದ ತರುವಾಯ ಮತ್ತು ದೇವದಾಸಿಯರ ಕಲ್ಯಾಣಕ್ಕೆ ಗಮನ ನೀಡಿ ಅವಳನ್ನು ಅವಳು 18 ವರ್ಷಗಳಿಗೆ ಕಡಿಮೆ ವಯಸ್ಸಾಗಿದ್ದರೆ ಪ್ರಮಾಣೀಕೃತ ಶಾಲೆಗೆ ಮತ್ತು ಅವಳಿಗೆ 18 ವರ್ಷಗಳು ಪೂರ್ತಿಯಾಗಿದ್ದರೆ ರಾಜ್ಯ ಮಹಿಳಾ ಗೃಹಕ್ಕೆ ಒಪ್ಪಿಸಬಹುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ,

(ಸಹಿ. ಸಿ. ರಾಮಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆ.

ಜೆಎಸ್‌ಆರ್–233